# ಮಾಸ ಭವಿಷ್ಯ

**ಅರುಣ ಪಿ. ಭಟ್**



**ಮೇಷ:** ಉದ್ಯೋಗದಲ್ಲಿ ಬಡ್ತಿ ಸಾಧ್ಯತೆ. ಆದಾಯದಲ್ಲಿ ಹೆಚ್ಚಳ. ಪಾಲುದಾರಿಕೆಯ ವ್ಯಾಪಾರದಲ್ಲಿ ಮಾತಿನ ಚಕಮಕಿ. ಸಹೋದರ ಸಹೋದರಿಯರಿಂದ ವ್ಯಾಪಾರದಲ್ಲಿ ಲಾಭ. ಸಂಗಾತಿ ಜೊತೆ ವಾಗ್ವಾದ, ಮನೆಯಲ್ಲಿ ಕಿರಿಕಿರಿ. ಖರ್ಚು–ವೆಚ್ಚ ಹಿಡಿತದಲ್ಲಿ ಇದ್ದರೆ ಉತ್ತಮ. ಶುಭ: 12, 16, 22 ಅಶುಭ: 11, 13, 26.



**ವೃಷಭ:** ಸರ್ಕಾರಿ ನೌಕರಿಯಲ್ಲಿರುವವರಿಗೆ ಉತ್ತಮ ಸಮಯ. ನಿರುದ್ಯೋಗಿಗಳಿಗೆ ಉದ್ಯೋಗ ಸಿಗುವ ಸಾಧ್ಯತೆ. ಮನೆಯಲ್ಲಿ ಸಂತಸದ ವಾತಾವರಣ. ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ಸು. ಕೋರ್ಟ್ ವ್ಯಾಜ್ಯಗಳಲ್ಲಿ ಯಶಸ್ಸು. ಹಣಕಾಸಿನ ಹರಿವು ಸುಗಮ. ಶುಭ: 10, 16, 21 ಅಶುಭ: 12, 14, 22.



**ಮಿಥುನ:** ರಾಜಕೀಯ ಕ್ಷೇತ್ರದಲ್ಲಿ, ಸಮಾಜ ಸೇವೆಯಲ್ಲಿ ಇರುವವರಿಗೆ ಉತ್ತಮ ಸಮಯ. ಮನೆಗೆ ಅಲಂಕಾರಿಕ ಸಾಮಗ್ರಿಗಳ ಖರೀದಿ. ಐಹಿಕ ಸುಖದ ಜೊತೆಗೆ ಪಾರಮಾರ್ಥಿಕ ಜ್ಞಾನ ಪಡೆಯುವತ್ತ ಮನಸ್ಸು ಹರಿಸುವಿರಿ. ಸತ್ಪುರುಷರ ಭೇಟಿ. ಉದ್ಯೋಗದಲ್ಲಿ ಕಿರಿಕಿರಿ. ಶುಭ: 12, 16, 23 ಅಶುಭ: 10, 14, 25.



**ಕರ್ಕ:** ವ್ಯಾಪಾರ–ಉದ್ಯೋಗದಲ್ಲಿ ಲಾಭ. ಕುಟುಂಬದ ಸದಸ್ಯರ ಸಹಾಯ. ನಿಮ್ಮ ಸುತ್ತಲಿರುವ ಜನರ ಸಲಹೆಗಳಿಗೆ ಕಿವಿಗೊಡಬೇಡಿ. ಇದರಿಂದ ಸಂಬಂಧಗಳಲ್ಲಿ ತೊಂದರೆಯುಂಟಾಗುವ ಸಾಧ್ಯತೆಗಳಿವೆ. ಹೊಸ ಮೂಲಗಳಿಂದ ಧನಲಾಭ, ಇದರಿಂದ ಮನೆಯಲ್ಲಿ ಸಂತೋಷ ನೆಲೆಸುವುದು. ಶುಭ: 13. 22, 29 ಅಶುಭ: 12, 18, 26.



**ಸಿಂಹ:** ಶಾರೀರಿಕ ಮಾನಸಿಕ ಉತ್ಸಾಹ ವೃದ್ಧಿಸುವುದು. ಸರ್ಕಾರಿ ಕೆಲಸಗಳು ತ್ವರಿತ ಗತಿಯಲ್ಲಿ ನಡೆಯುವವು. ಮಿತ್ರರಿಂದ ವಿರೋಧ ಕಾಣಿಸುವುದು. ಕೃಷಿ ಉತ್ಪನ್ನ ವಿಕ್ರಯದಾರರಿಗೆ ಲಾಭ. ಮಹತ್ವದ ಮಾತುಕತೆ. ಮನೆಯಲ್ಲಿ ಧಾರ್ಮಿಕ ಕಾರ್ಯ ನಡೆಸುವಿರಿ. ಶುಭ: 6, 14, 23 ಅಶುಭ: 16, 20, 25.



**ಕನ್ಯಾ:** ಅನಿರೀಕ್ಷಿತ ಖರ್ಚು. ಸರ್ಕಾರಿ ಕೆಲಸಗಳಲ್ಲಿ ವ್ಯತ್ಯಯ. ಬಂಧುಗಳಿಗೆ ಆಪತ್ತು. ಮನೆಕೆಲಸ ಅರ್ಧಕ್ಕೆ ನಿಲ್ಲುವುದು. ಅಧಿಕಾರಿಗಳಿಗೆ ಹಿನ್ನಡೆ. ಅವಿವಾಹಿತರಿಗೆ ವಿವಾಹ ಭಾಗ್ಯ. ತಿಂಗಳ ಕೊನೆಗೆ ಮನೆಯ ಆರ್ಥಿಕ ವ್ಯವಸ್ಥೆ ಉತ್ತಮಗೊಳ್ಳುವುದು. ಶುಭ: 09, 16, 23 ಅಶುಭ: 12, 20, 26.



**ತುಲಾ:** ಆಕಸ್ಮಿಕ ಧನಲಾಭ. ನಿರುದ್ಯೋಗಿಗಳಿಗೆ ಉದ್ಯೋಗ ಸಿಗುವುದು. ಅವಿವಾಹಿತರಿಗೆ ವಿವಾಹ ಭಾಗ್ಯ. ವ್ಯಾಪಾರದಲ್ಲಿ ಲಾಭ. ದುಬಾರಿ ವಸ್ತುಗಳ ಖರೀದಿ. ಕುಟುಂಬ ಸೌಖ್ಯ. ಒಟ್ಟಾರೆ ಎಲ್ಲಾ ದೆಸೆಯಿಂದಲೂ ಸಂತಸ–ಲಾಭ–ಅನುಕೂಲದ ವಾತಾವರಣ ನಿಮ್ಮದಾಗುವುದು. ಶುಭ: 07, 14, 23 ಅಶುಭ: 11, 16, 24.



**ವೃಶ್ಚಿಕ:** ಕಷ್ಟದಲ್ಲೂ ಇಷ್ಟ ಫಲ ಪ್ರಾಪ್ತಿಯಾಗುವುದು. ವಿದೇಶಿ ಪ್ರವಾಸಕ್ಕೆ ಸಿದ್ಧತೆ. ಸರ್ಕಾರಿ ಅಧಿಕಾರ ಸಿಗುವ ಯೋಗವಿದೆ. ಶಿಕ್ಷಕರಿಗೆ ಪದೋನ್ನತಿಯೊಡನೆ ವರ್ಗಾವಣೆ ಸಂಭವ. ಕುಟುಂಬ ವರ್ಗದಲ್ಲಿ ಅನಾರೋಗ್ಯ. ಮನೆಗೆ ಬಂಧುಮಿತ್ರರ ಆಗಮನ. ವಿದ್ಯಾರ್ಥಿಗಳಿಗೆ ಯಶಸ್ಸು. ಶುಭ: 10, 12, 20 ಅಶುಭ: 14, 16, 22.



**ಧನು:** ಬಹಳ ಕಾಲದ ನಂತರ ಸೋದರ ಸಂಬಂಧಿಗಳನ್ನು ಭೇಟಿಯಾಗಲಿದ್ದೀರಿ. ಉದ್ಯೋಗಸ್ಥರಿಗೆ ತಾತ್ಕಾಲಿಕ ವರ್ಗಾವಣೆ. ಸಂಗಾತಿ ಮಕ್ಕಳ ಜತೆಗಿನ ಬಾಂಧವ್ಯ ವೃದ್ಧಿಸುವುದು. ವ್ಯಾಪಾರ ವ್ಯವಹಾರದಲ್ಲಿ ಪ್ರಗತಿ. ದಾಖಲೆ ಪತ್ರಗಳ ಬಗ್ಗೆ ಹೆಚ್ಚು ಎಚ್ಚರಿಕೆಯಿಂದ ಇರಬೇಕು. ಶುಭ: 14, 26, 30 ಅಶುಭ: 12, 18, 22.



**ಮಕರ:** ಆದಾಯದಲ್ಲಿ ಹೆಚ್ಚಳ, ಆದರೆ ಖರ್ಚನ್ನು ಕಡಿಮೆ ಮಾಡಿಕೊಳ್ಳಬೇಕು. ಉದ್ಯಮಿಗಳು, ಉದ್ಯೋಗಸ್ಥರು ಹಿಂದೆಂದಿಗಿಂತ ಹೆಚ್ಚು ಚಟುವಟಿಕೆಯಿಂದ ಕೆಲಸ ಮಾಡುತ್ತೀರಿ. ವರ್ಚಸ್ಸು, ಸ್ಥಾನಮಾನ ಹೆಚ್ಚಾಗಲಿದೆ. ವೈಯಕ್ತಿಕ ಜೀವನದಲ್ಲಿ ಭಿನ್ನಾಭಿಪ್ರಾಯ ತಲೆದೋರಲಿದೆ. ಶುಭ: 14, 16, 29 ಅಶುಭ: 18, 20, 22.



**ಕುಂಭ:** ವ್ಯಾಪಾರ, ವ್ಯವಹಾರಸ್ಥರಿಗೆ ಉತ್ತಮ ಸಮಯ. ಅಂದುಕೊಂಡ ಹಲವು ಕೆಲಸಗಳು ಪೂರ್ಣಗೊಳ್ಳುತ್ತವೆ. ಉದ್ಯೋಗಸ್ಥರು ಕೆಲಸದಲ್ಲಿ ಗುಣಮಟ್ಟದ ವೇಗ ಕಂಡುಕೊಳ್ಳುವಿರಿ. ಸಾಮಾಜಿಕ ಸ್ಥಾನಮಾನ ಹೆಚ್ಚಲಿದೆ. ತಲೆ ನೋವು, ಹಲ್ಲು ನೋವು ಕಾಣಿಸಿಕೊಳ್ಳಬಹುದು. ಶುಭ: 11, 16, 24 ಅಶುಭ: 15, 18, 20.



**ಮೀನ:** ತಂತ್ರಜ್ಞಾನ, ಸಾಹಿತ್ಯ, ಸಿನಿಮಾ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರಿಗೆ ಹಲವು ಅವಕಾಶಗಳು ಬರಲಿವೆ. ಕೆಲಸದಲ್ಲಿ ಬಡ್ತಿ ಸಾಧ್ಯತೆಯೂ ಇದೆ. ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ ಅತ್ಯುತ್ತಮ ಅವಧಿ. ಧನಲಾಭ, ಮುಂಬರುವ ದಿನಗಳಲ್ಲಿ ಸಕಾರಾತ್ಮಕ ಅವಕಾಶಗಳು ಸಿಗಲಿವೆ. ಶುಭ: 12, 16, 30 ಅಶುಭ: 14, 16, 23.